# ಡಾ: ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ

9ನೇ ಮಹಡಿ, ವಿಶ್ವೇಶ್ವರಯ್ಯ ಚಿಕ್ಕ ಗೋಪುರ, ಡಾ: ಅಂಬೇಡ್ಕರ್ ವೀದಿ, ಬೆಂಗಳೂರು-01.

**ದಿನಾಂಕ:22.12.2015ರಂದು ಮಧ್ಯಾಹ್ನ 3.00 ಗಂಟೆಗೆ ನಿಗಮದ ಕೇಂದ್ರ ಕಚೇರಿಯಲ್ಲಿರುವ ಮಾನ್ಯ ಅಧ್ಯಕ್ಷರ ಕೊಠಡಿಯಲ್ಲಿ ನಡೆದ ನಿಗಮದ 210ನೇ ನಿರ್ದೇಶಕರ ಮಂಡಳ ಸಭೆಯ ನಡವಳಿಗಳು:**

**ಹಾಜರಾತಿ:**

| ಹೆಸರು ಮತ್ತು ಪದನಾಮ | |
|---|---|
| ಕುಮಾರಿ ಮಲ್ಲಾಜಮ್ಮ,<br>ಮಾನ್ಯ ಅಧ್ಯಕ್ಷರು, ಡಾ:ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ | ಅಧ್ಯಕ್ಷರು |
| ಶ್ರೀ ಗಂಗಾರಾಮ್ ಬಡೇರಿಯಾ, ಭಾ.ಆ.ಸೇ.,<br>ಸರ್ಕಾರದ ಕಾರ್ಯದರ್ಶಿಗಳು,<br>ಸಮಾಜ ಕಲ್ಯಾಣ ಇಲಾಖೆ,<br>ಕರ್ನಾಟಕ ಸರ್ಕಾರ | ಸದಸ್ಯರು |
| ಶ್ರೀ.ಕೆ.ಸಿ.ಶ್ರೀರಾಮಯ್ಯ, ಕ.ಆ.ಸೇ., (ಎಸ್‌ಟಿಎಸ್)<br>ವ್ಯವಸ್ಥಾಪಕ ನಿರ್ದೇಶಕರು<br>ಡಾ:ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ | ಸದಸ್ಯ ಕಾರ್ಯದರ್ಶಿ |
| ಶ್ರೀ ರಾಮಚಂದ್ರಯ್ಯ,<br>ಸರ್ಕಾರದ ಉಪ ಕಾರ್ಯದರ್ಶಿಗಳು (ಕಲ್ಯಾಣ)<br>ಆರ್ಥಿಕ ಇಲಾಖೆ | ಸದಸ್ಯರು |
| ಶ್ರೀ ಭೋಜ್ಯನಾಯಕ್<br>ವ್ಯವಸ್ಥಾಪಕ ನಿರ್ದೇಶಕರು,<br>ಕರ್ನಾಟಕ ತಾಂಡ ಅಭಿವೃದ್ಧಿ ನಿಗಮ ನಿಯಮಿತ | ಸದಸ್ಯರು |
| ಶ್ರೀಮತಿ ಎಲ್. ರಾಜೇಶ್ವರಿ<br>ಉಪ ಕಾರ್ಯದರ್ಶಿಗಳು,<br>ಸಾರ್ವಜನಿಕ ಉದ್ದಿಮೆಗಳ ಇಲಾಖೆ | ಸದಸ್ಯರು |

**ಗೈರು ಹಾಜರಿ:**

| | |
|---|---|
| ಶ್ರೀಮತಿ ಎಂ.ವಿ. ಸಾವಿತ್ರಿ, ಭಾ.ಆ.ಸೇ.,<br>ಆಯುಕ್ತರು,<br>ಸಮಾಜ ಕಲ್ಯಾಣ ಇಲಾಖೆ, | ಸದಸ್ಯರು |
| ಅಧ್ಯಕ್ಷರು ಹಾಗೂ ವ್ಯವಸ್ಥಾಪಕ ನಿರ್ದೇಶಕರು<br>ರಾಷ್ಟ್ರೀಯ ಪರಿಶಿಷ್ಟ ಜಾತಿ ಹಣಕಾಸು ಮತ್ತು ಅಭಿವೃದ್ಧಿ ನಿಗಮ, ಭಾರತ ಸರ್ಕಾರ, ನವದೆಹಲಿ | ಸದಸ್ಯರು |
| ನಿರ್ದೇಶಕರು,<br>ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಮಂತ್ರಾಲಯ,<br>ಭಾರತ ಸರ್ಕಾರ, ನವದೆಹಲಿ | ಸದಸ್ಯರು |

ವ್ಯವಸ್ಥಾಪಕ ನಿರ್ದೇಶಕರು ನಿಗಮದ ಮಾನ್ಯ ಅಧ್ಯಕ್ಷರನ್ನು ಹಾಗೂ ಸಭೆಯಲ್ಲಿ ಹಾಜರಿದ್ದ ಸರ್ಕಾರದ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ ಮತ್ತು ನಿರ್ದೇಶಕರ ಮಂಡಳಿಯ ಇತರೆ ಸದಸ್ಯರನ್ನು ಸ್ವಾಗತಿಸಿದರು. ಸಭೆಗೆ ಕೋರಂ ಇರುವುದನ್ನು ಖಾತರಿಪಡಿಸಿಕೊಂಡ ನಂತರ ಸಭೆ ನಡೆಸಬಹುದೆಂದು ಮಾನ್ಯ ಅಧ್ಯಕ್ಷರ ಗಮನಕ್ಕೆ ತರಲಾಯಿತು. 210ನೇ ಆಡಳಿತ ಮಂಡಳಿ ಸಭೆಯ ಅಧ್ಯಕ್ಷತೆಯನ್ನು ವಹಿಸಿ ಸಭೆಯನ್ನು ನಡೆಸಿಕೊಡಲು ವ್ಯವಸ್ಥಾಪಕ ನಿರ್ದೇಶಕರು ನಿಗಮದ ಮಾನ್ಯ ಅಧ್ಯಕ್ಷರನ್ನು ಕೋರಿದರು. 210ನೇ ಆಡಳಿತ ಮಂಡಳಿ ಸಭೆಯ ವಿಷಯವಾರು ನಡವಳಿ ಈ ಕೆಳಗಿನಂತಿದೆ.

**ವಿಷಯ ಸಂಖ್ಯೆ: 01: 209ನೇ ನಿರ್ದೇಶಕರ ಮಂಡಳಿ ಸಭೆಯ ನಡವಳಿ ಅಂಗೀಕರಿಸುವ ಕುರಿತು.**

.....

ದಿನಾಂಕ:28.10.2015 ರಂದು ನಡೆದ 209ನೇ ನಿರ್ದೇಶಕರ ಮಂಡಳಿಯ ಸಭೆಯಲ್ಲಿ ತೆಗೆದುಕೊಂಡ ವಿಷಯವಾರು ತೀರ್ಮಾನಗಳ ನಡವಳಿಯನ್ನು ಸರ್ವ ಸದಸ್ಯರಿಗೂ ಕಳುಹಿಸಲಾಗಿತ್ತು. ಯಾವುದೇ ನಿರ್ದೇಶಕರುಗಳಿಂದ ಸದರಿ ನಡವಳಿಯ ಬಗ್ಗೆ ವ್ಯತಿರಿಕ್ತ ಅಭಿಪ್ರಾಯಗಳು ಬಂದಿರುವುದಿಲ್ಲವೆಂಬುದನ್ನು ಸಭೆಯ ಗಮನಕ್ಕೆ ತರಲಾಯಿತು ಮತ್ತು ನಡವಳಿಯನ್ನು ಯಥಾವತ್ತಾಗಿ ಅಂಗೀಕರಿಸುವ ಬಗ್ಗೆ ಸಭೆಯನ್ನು ಕೋರಲಾಯಿತು.

**ನಿರ್ಣಯ: ನಿರ್ದೇಶಕರ ಮಂಡಳಿ ನಿರ್ದೇಶಕರಿಂದ ವ್ಯತಿರಿಕ್ತ ಅಭಿಪ್ರಾಯಗಳು ಬಾರದ ಕಾರಣ, ನಡವಳಿಯನ್ನು ಯಥಾವತ್ತಾಗಿ ಅಂಗೀಕರಿಸಿ ಸ್ಥಿರೀಕರಿಸಲು ಸಭೆಯು ನಿರ್ಣಯಿಸಿತು.**

**ವಿಷಯ ಸಂಖ್ಯೆ: 02 :** ಬಿ.ಬಿ.ಎಂ.ಪಿ ಯಲಹಂಕ ವ್ಯಾಪ್ತಿಯ 16 ಫಲಾಪೇಕ್ಷಿಗಳಿಗೆ ರೂ. 5.60 ಲಕ್ಷ ಸಹಾಯಧನವನ್ನು ಸ್ವಯಂ ಉದ್ಯೋಗ ಯೋಜನೆಯಡಿ ಮಂಜೂರಾತಿ ನೀಡುವ ಬಗ್ಗೆ

........

ಜಂಟಿ ಆಯುಕ್ತರು, ಯಲಹಂಕ ವಲಯ, ಬಿ.ಬಿ.ಎಂ.ಪಿ. ಹಾಗೂ ದಲಿತ ಸಂಘರ್ಷ ಸಮಿತಿ (ರಿ) (ಸಮತಾ ವಾದ), ರಾಜ್ಯಾಧ್ಯಕ್ಷರು, ಬೆಂಗಳೂರು ಇವರು ಬಿ.ಬಿ.ಎಂ.ಪಿ. ಯಲಹಂಕ ವಲಯ ವಾರ್ಡ್ ನಂ.2, ಕಾಮಾಕ್ಷಮ್ಮ ಬಡಾವಣೆಯಲ್ಲಿ (ಮಾರಮ್ಮ ಬಂಡೆ ಬಡಾವಣೆ) ಪರಿಶಿಷ್ಟ ಜಾತಿ ಕೊರಮ, ಭೋವಿ, ಆದಿ ಕರ್ನಾಟಕ, ಆದಿ ದ್ರಾವಿಡ, ಶಿಳ್ಳೆಕ್ಯಾತ ಜಾತಿಗೆ ಸೇರಿದ 61 ಕುಟುಂಬಗಳು ಸರ್ಕಾರಿ ಕರಾಬು ಜಾಗದಲ್ಲಿ ಮನೆ ನಿರ್ಮಿಸಿಕೊಂಡು ವಾಸಿಸುತ್ತಿದ್ದು, ಹಂದಿ ಸಾಕಾಣಿಕೆ ವೃತ್ತಿಯಲ್ಲಿ ತೊಡಗಿರುತ್ತಾರೆ. 2015ರ ಜುಲೈ ತಿಂಗಳಲ್ಲಿ ಹಂದಿ ಜ್ವರ ಹರಡಬಹುದೆಂಬ ಕಾರಣದಿಂದ ಅವರುಗಳು ಸಾಕಾಣಿಕೆ ಮಾಡುತ್ತಿದ್ದ ಹಂದಿಗಳನ್ನು ಮಹಾನಗರ ಪಾಲಿಕೆ ಅಧಿಕಾರಿಗಳು ಬೇರೆ ಕಡೆ ಸಾಗಿಸಲು ಪ್ರಯತ್ನಿಸಿದ್ದರು. ಆದರೆ ಸ್ಥಳೀಯರ ಪ್ರತಿಭಟನೆ ಹಿನ್ನೆಲೆಯಲ್ಲಿ ಸಧ್ಯಕ್ಕೆ ಹಂದಿಗಳನ್ನು ಸ್ಥಳಾಂತರಿಸುವ ಕಾರ್ಯವನ್ನು ಸ್ಥಗಿತಗೊಳಿಸಿರುತ್ತಾರೆ.

ಈ ಹಿನ್ನೆಲೆಯಲ್ಲಿ ಮೇಲ್ಕಂಡ 61 ಕುಟುಂಬಗಳಿಗೆ ಸಾಲ ಸೌಲಭ್ಯ ಒದಗಿಸಬೇಕೆಂದು, ಮಹಾನಗರ ಪಾಲಿಕೆಯ ಆಯುಕ್ತರು ಪ್ರಸ್ತಾವನೆಯೊಂದನ್ನು ಕಳುಹಿಸಿ, ಈ ಪೈಕಿ 16 ಕುಟುಂಬಗಳಿಗೆ 2015-16ನೇ ಸಾಲಿನಲ್ಲಿ ಸ್ವಯಂ ಉದ್ಯೋಗ ಯೋಜನೆಯಡಿ ಸೌಲಭ್ಯ ಒದಗಿಸುವಂತೆ ಕೋರಿರುತ್ತಾರೆ.

ನಿಗಮದ 2015-16ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆ ಈಗಾಗಲೇ ತಯಾರಿಸಿ, ಜಿಲ್ಲೆಗಳಿಗೆ ಗುರಿ ಹಂಚಲಾಗಿದ್ದು, ಆಯ್ಕೆ ಪ್ರಕ್ರಿಯೆ ಮುಕ್ತಾಯದ ಹಂತದಲ್ಲಿರುವುದರಿಂದ, ಈ ಹಂತದಲ್ಲಿ ಇಷ್ಟು ಕುಟುಂಬಗಳಿಗೆ ಸಹಾಯ ಒದಗಿಸಲು ಕಷ್ಟ ಸಾಧ್ಯವೆಂದು ಈಗಾಗಲೇ ತಿಳಿಸಲಾಗಿದ್ದರೂ, ಮಾನವೀಯತೆಯ ನೆಲೆಯಲ್ಲಿ ವಿಶೇಷ ಪ್ರಕರಣವೆಂದು ಪರಿಗಣಿಸಿ, ಒಟ್ಟು 16 ಫಲಾಪೇಕ್ಷಿಗಳಿಗೆ ತಲಾ ರೂ. 35,000/-ರಂತೆ ಸಹಾಯಧನ ರೂ. 65,000/- ಬ್ಯಾಂಕ್ ಸಾಲ ಮಂಜೂರಾತಿ ಷರತ್ತಿಗೊಳಪಡಿಸಿ

ತಲಾ ರೂ. 1.00 ಲಕ್ಷ ಘಟಕ ವೆಚ್ಚದಲ್ಲಿ ಸ್ವಯಂ ಉದ್ಯೋಗ ಯೋಜನೆಯಡಿ ಒಟ್ಟು ರೂ. 5.60ಲಕ್ಷ ಮಂಜೂರು ಮಾಡುವ ಬಗ್ಗೆ ನಿರ್ದೇಶಕ ಮಂಡಳಿಯು ಪರಿಶೀಲಿಸಿತು. ಈ ಸಂಬಂಧ ಬಿ.ಬಿ.ಎಂ.ಪಿ. ಯವರು ಶೇ.24.10ರ ಅನುದಾನದಲ್ಲಿ ಸಹಾಯಧನ ಒದಗಿಸುವಂತೆ ತಿಳಿಸಲು ಮತ್ತು ಈ ಬಗ್ಗೆ ಸರ್ಕಾರದಿಂದ ಸಹ ಪತ್ರ ಮುಖೇನ ಆಯುಕ್ತರು, ಬಿ.ಬಿ.ಎಂ.ಪಿ ರವರಿಗೆ ತಿಳಿಸಲು ನಿರ್ಣಯಿಸಿತು.

ನಿರ್ಣಯ: **ಬಿ.ಬಿ.ಎಂ.ಪಿ ಯಲಹಂಕ ವ್ಯಾಪ್ತಿಯ 16 ಫಲಾಪೇಕ್ಷಿಗಳಿಗೆ ಸಾಲಸೌಲಭ್ಯ ಕಲ್ಪಿಸಲು ಸಹಾಯಧನವನ್ನು ಬಿ.ಬಿ.ಎಂ.ಪಿ. ಯವರು ಶೇ.24.10ರ ಅನುದಾನದಲ್ಲಿ ಒದಗಿಸುವಂತೆ ತಿಳಿಸಲು ಮತ್ತು ಈ ಬಗ್ಗೆ ಪತ್ರದ ಮುಖೇನ ಆಯುಕ್ತರು, ಬಿ.ಬಿ.ಎಂ.ಪಿ ರವರಿಗೆ ತಿಳಿಸಲು ನಿರ್ಣಯಿಸಿತು.**

**ವಿಷಯ ಸಂಖ್ಯೆ: 03 :** 2015-16ನೇ ಸಾಲಿಗೆ ಉದ್ಯಮ ಶೀಲತಾ ಅಭಿವೃದ್ಧಿ ಯೋಜನೆಯಡಿ ಸಾರಿಗೆ ವಾಹನ ಉದ್ದೇಶಕ್ಕೆ ಹೆಚ್ಚುವರಿ ಗುರಿ ನಿಗದಿಪಡಿಸುವ ಬಗ್ಗೆ

ಸರ್ಕಾರಿ ಆದೇಶ ಸಂಖ್ಯೆ: ಸಕಇ 284 ಎಸ್‌ಎಲ್‌ಪಿ 2015, ಬೆಂಗಳೂರು ದಿನಾಂಕ: 24.07.2015 ರಲ್ಲಿ ಲೆಕ್ಕ ಶೀರ್ಷಿಕೆ 2225-01-800-0-19 (ಯೋಜನೆ) (059) ಸಾರಿಗೆ ವಾಹನ ಸೌಲಭ್ಯ ಕಲ್ಪಿಸಲು ರೂ. 7.00 ಕೋಟಿ ಮಂಜೂರು ಮಾಡಲಾಗಿದೆ. ಈ ಪೈಕಿ ಸಕನಿ/ಲೇಪಸ/ಎ1/ಸಿಆರ್-16/ಸ್ಪೀರ/2015-16, ದಿನಾಂಕ: 16.10.2015 ರಲ್ಲಿ ರೂ. 350.00 ಲಕ್ಷ ಸಹಾಯಧನ ಬಿಡುಗಡೆ ಆಗಿರುತ್ತದೆ. ಸರ್ಕಾರದಿಂದ ಮಂಜೂರಾದ ರೂ.7.00ಕೋಟಿಗಳಲ್ಲಿ ಬಾಕಿ ರೂ.350.00 ಲಕ್ಷ ಹಣ ಬಿಡುಗಡೆ ನಿರೀಕ್ಷಿಸಿ 30 ಜಿಲ್ಲೆಗಳಿಗೆ ಕ್ಷೇತ್ರವಾರು 2011ರ ಪರಿಶಿಷ್ಟ ಜಾತಿಯ ಜನಸಂಖ್ಯೆಯನ್ನಾಧರಿಸಿ ಶೇ.80 ಗುರಿ ನಿಗದಿಪಡಿಸಿ, ಉಳಿಕೆ ಶೇ. 20ರಷ್ಟು ನಿಗಮದಲ್ಲಿ ಸಾಂಸ್ಥಿಕ ಗುರಿಗೆ ಕಾಯ್ದಿರಿಸಿ ಸದರಿ ಅನುದಾನವನ್ನು ಹೆಚ್ಚುವರಿಯಾಗಿ ಗುರಿ ನಿಗದಿಪಡಿಸಿ ಕಾರ್ಯಕ್ರಮ ಅನುಷ್ಟಾನಗೊಳಿಸಲು ನಿರ್ದೇಶಕರ ಮಂಡಳಿ ಸಭೆಯ ಅನುಮೋದನೆ ನೀಡಿತು.

ನಿರ್ಣಯ: **ಸರ್ಕಾರದಿಂದ ಮಂಜೂರಾದ ರೂ.7.00ಕೋಟಿ ಅನುದಾನವನ್ನು 30 ಜಿಲ್ಲೆಗಳಿಗೆ ವಿಧಾನಸಭಾ ಕ್ಷೇತ್ರವಾರು ಶೇ.80 ಗುರಿ ನಿಗದಿಪಡಿಸಿ, ಉಳಿಕೆ ಶೇ. 20ರಷ್ಟು ನಿಗಮದಲ್ಲಿ ಸಾಂಸ್ಥಿಕ ಗುರಿಗೆ ಕಾಯ್ದಿರಿಸಿ, ಕಾರ್ಯಕ್ರಮ ಅನುಷ್ಟಾನಗೊಳಿಸಲು ನಿರ್ದೇಶಕರ ಮಂಡಳಿ ಸಭೆಯು ನಿರ್ಣಯಿಸಿತು.**

**ವಿಷಯ ಸಂಖ್ಯೆ: 04 :** 2015-16ನೇ ಸಾಲಿನಲ್ಲಿ ರಾಷ್ಟ್ರೀಯ ಪರಿಶಿಷ್ಟ ಜಾತಿ ಹಣಕಾಸು ಮತ್ತು ಅಭಿವೃದ್ಧಿ ನಿಗಮ, ನವದೆಹಲಿ ಇವರ ಸಹಯೋಗದೊಡನೆ 300 ಇನ್ನೋವ ಕಾರುಗಳಿಗೆ ಅವಧಿಸಾಲ, ಸಹಾಯಧನ ಒದಗಿಸುವ ಬಗ್ಗೆ.

2015-16ನೇ ಸಾಲಿನಲ್ಲಿ ರಾಷ್ಟ್ರೀಯ ಪರಿಶಿಷ್ಟ ಜಾತಿ ಹಣಕಾಸು ಮತ್ತು ಅಭಿವೃದ್ಧಿ ನಿಗಮ, ನವದೆಹಲಿ ಇವರ ಸಹಯೋಗದೊಡನೆ 300 ಇನ್ನೋವ ಕಾರುಗಳಿಗೆ ರೂ. 2.00 ಲಕ್ಷದಿಂದ ರೂ.4.00ಲಕ್ಷ ಸಹಾಯಧನ ಹೆಚ್ಚಿಸಿ ಸಾಲ ಸೌಲಭ್ಯ ಕಲ್ಪಿಸಲು ದಿನಾಂಕ: 25.04.2015ರಂದು ನಡೆದ ನಿಗಮದ 206ನೇ ನಿರ್ದೇಶಕ ಮಂಡಳಿ ಅನುಮೋದನೆ ಪಡೆದು ಸರ್ಕಾರಕ್ಕೆ ಅನುಮತಿ ಕೋರಿ ದಿನಾಂಕ: 19.05.2015ರಲ್ಲಿ ಪ್ರಸ್ತಾವನೆ ಸಲ್ಲಿಸಲಾಗಿತ್ತು. ಈ ಸಂಬಂಧ ಸರ್ಕಾರದ ಪತ್ರ ಸಂಖ್ಯೆ: ಸಕಇ/227/ಎಸ್‌ಡಿಸಿ/2015, ದಿನಾಂಕ: 23.09.2015ರಲ್ಲಿ ರಾಷ್ಟ್ರೀಯ ಪರಿಶಿಷ್ಟ ಜಾತಿ ಹಣಕಾಸು ಮತ್ತು ಅಭಿವೃದ್ಧಿ ನಿಗಮ, ನವದೆಹಲಿಯವರಿಂದ ಅವಧಿಸಾಲ ಮಂಜೂರಾತಿಯ ಬಗ್ಗೆ ಒಪ್ಪಿಗೆ ಪಡೆದು ಮರು ಪ್ರಸ್ತಾವನೆ ಸಲ್ಲಿಸಲು ಸೂಚಿಸಲಾಗಿರುತ್ತದೆ. ಅದರಂತೆ ಎನ್‌ಎಸ್‌ಎಫ್‌ಡಿಸಿ, ನವದೆಹಲಿ ಇವರಿಗೆ ದಿನಾಂಕ: 07.10.2015ರಂದು ತಲಾ ರೂ.12.75 ಲಕ್ಷದಂತೆ ಒಟ್ಟು ಅವಧಿಸಾಲ ರೂ. 3832.50ಲಕ್ಷ

ಮಂಜೂರು ಮಾಡಲು ಪ್ರಸ್ತಾವನೆ ಸಲ್ಲಿಸಲಾಗಿತ್ತು. ಎನ್‌ಎಸ್‌ಎಫ್‌ಡಿಸಿ, ನವದೆಹಲಿ ಇವರ ಪತ್ರ ದಿನಾಂಕ: 09.11.2015ರಲ್ಲಿ ನಿಗಮದ ಉದ್ದೇಶಿತ ಪ್ರಸ್ತಾವನೆಗೆ ಅವಧಿಸಾಲ ಮಂಜೂರಾತಿ ನೀಡಲು ಸಧ್ಯಕ್ಕೆ ಸಾಧ್ಯವಿಲ್ಲವೆಂದು ತಿಳಿಸಿರುವ ಪತ್ರದ ಸಾರಾಂಶವನ್ನು ನಿರ್ದೇಶಕ ಮಂಡಳಿ ಸಭೆಯು ಅವಗಾಹಿಸಿತು.

**ನಿರ್ಣಯ: ಸದರಿ ವಿಷಯವನ್ನು ನಿರ್ದೇಶಕರ ಮಂಡಳಿ ಅವಗಾಹಿಸಿ ಮುಂದೂಡಿತು.**

**ವಿಷಯ ಸಂಖ್ಯೆ: 05 :** ಮೈಕ್ರೋ ಕ್ರೆಡಿಟ್ ಕಿರುಸಾಲ ಯೋಜನೆಯಡಿ ಬೀಜಧನ ಒದಗಿಸಲು ಕೋರಿರುವ ಕುರಿತು

* * * * *

ಜಂಟಿ ಆಯುಕ್ತರು (ಪಶ್ಚಿಮ) ಬಿ.ಬಿ.ಎಂ.ಪಿ. ಇವರು ದಿನಾಂಕ: 07.01.2015ರ ಪತ್ರದಲ್ಲಿ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯ ವಿವಿಧ ವಿಧಾನಸಭಾ ಕ್ಷೇತ್ರವಾರು 47 ಸ್ವ-ಸಹಾಯ ಸಂಘದ 3984 ಫಲಾಪೇಕ್ಷಿಗಳಿಗೆ ವಿವಿಧ ಉದ್ದೇಶಗಳಿಗೆ ಮೈಕ್ರೋ ಕ್ರೆಡಿಟ್ ಕಿರುಸಾಲ ಯೋಜನೆಯಡಿ ತಲಾ ಸಹಾಯಧನ ಗರಿಷ್ಟ ರೂ.10,000/-ದಂತೆ ಒಟ್ಟು ರೂ.3,98,40,000/-ಗಳನ್ನು ನಿಗಮಕ್ಕೆ ಬಿಡುಗಡೆ ಮಾಡಲು ಕ್ರಮ ವಹಿಸಬೇಕಾಗಿರುತ್ತದೆ ಎಂದು ತಿಳಿಸಿರುತ್ತಾರೆ.

ಜಿಲ್ಲಾ ವ್ಯವಸ್ಥಾಪಕರು, ಬೆಂಗಳೂರು ನಗರ ಜಿಲ್ಲೆ ಇವರು ಪತ್ರ ಸಂಖ್ಯೆ: ಡಾ।। ಬಿ.ಆರ್. ಅಂಅನಿ/ಬೆಂ.ನ/ಜಿವ್ಯ/ಮೈಕ್ರೋ/3844/12-13 ದಿನಾಂಕ:06.03.2013 ರಲ್ಲಿ ಪತ್ರ ಬರೆದು ವ್ಯವಹರಿಸಲಾಗಿದೆ. ಈಗಿನ ಜಿಲ್ಲಾ ವ್ಯವಸ್ಥಾಪಕರು ಸಹ ಖುದ್ದಾಗಿ ಭೇಟಿ ನೀಡಿ ಚರ್ಚಿಸಲಾಗಿ ಬಿ.ಬಿ.ಎಂ.ಪಿ.ಯಿಂದ ಸಹಾಯಧನ ನೀಡಲು ಒಪ್ಪಿರುವುದಾಗಿ ತಿಳಿಸಿರುತ್ತಾರೆ. ಸದರಿ ಮೈಕ್ರೋ ಕ್ರೆಡಿಟ್ ಕಿರುಸಾಲ ಯೋಜನೆಯು ಪರಿಶಿಷ್ಟ ಜಾತಿಯ ಮಹಿಳೆಯರ ಸ್ತ್ರೀ ಶಕ್ತಿ ಸ್ವ-ಸಹಾಯ ಗುಂಪುಗಳಿಗೆ ಸಾಲ ಸೌಲಭ್ಯ ಒದಗಿಸಿದಲ್ಲಿ ಮಹಿಳೆಯರ ಆರ್ಥಿಕಾಭಿವೃದ್ಧಿಗೆ ಸಹಾಯವಾಗಲಿರುವುದರಿಂದ ನಿಗಮದಿಂದ ಬೀಜಧನ ಒದಗಿಸಲು ಕೋರಿರುತ್ತಾರೆ.

ಪ್ರಸ್ತುತ ಮೈಕ್ರೋ ಕ್ರೆಡಿಟ್ ಕಿರುಸಾಲ ಯೋಜನೆಯಡಿ ಪ್ರತಿಯೊಬ್ಬ ಮಹಿಳಾ ಫಲಾಪೇಕ್ಷಿಗಳಿಗೆ ತಲಾ ರೂ.15,000/-ದಂತೆ ಸಾಲ ಸೌಲಭ್ಯ ಒದಗಿಸಲು ಘಟಕ ವೆಚ್ಚ ನಿಗದಿಪಡಿಸಿದ್ದು, ಇದರಲ್ಲಿ ಸಹಾಯಧನ ರೂ. 10,000-00 ಮತ್ತು ಬೀಜಧನ ರೂ. 5,000-00 ಇರುತ್ತದೆ.

ಜಂಟಿ ಆಯುಕ್ತರು (ಪಶ್ಚಿಮ) ಬಿ.ಬಿ.ಎಂ.ಪಿ. ಇವರ ಶಿಫಾರಸ್ಸಿನಂತೆ 47 ಸಂಘಗಳ 3984 ಫಲಾಪೇಕ್ಷಿಗಳಿಗೆ ಸಹಾಯಧನ ರೂ.398.40 ಲಕ್ಷ ಮತ್ತು ನಿಗಮದಿಂದ ಬೀಜಧನ ರೂ.199.20 ಲಕ್ಷ ಬೇಕಾಗುತ್ತದೆ.

ಪ್ರಸ್ತುತ ನಿಗಮದಲ್ಲಿ ಸದರಿ ಯೋಜನೆಯಡಿ 2013-14ನೇ ಸಾಲಿನಲ್ಲಿ ಬಾಕಿ ಉಳಿದಿರುವ ಮೊತ್ತ ಕೆಳಕಂಡಂತಿದೆ.

| | |
|---|---|
| ಸಹಾಯಧನ | - ರೂ. 243.17 |
| ಬೀಜಧನ | - ರೂ. 121.55 |
| ಒಟ್ಟು | ರೂ. 364.72 |

ಮೇಲ್ಕಂಡಂತೆ 3984 ಫಲಾಪೇಕ್ಷಿಗಳಿಗೆ ಅವಶ್ಯವಿರುವ ಬೀಜಧನ ಮೊತ್ತ ರೂ.1,99,20,000/-ಗಳನ್ನು 2013-14ನೇ ಸಾಲಿನಲ್ಲಿ ಉಳಿದಿರುವ ಮೊತ್ತವನ್ನು ಎಲ್ಲಾ ವಿಧಾನಸಭಾ ಕ್ಷೇತ್ರಗಳಿಗೆ ಹಂಚಿಕೆ ಮಾಡಲು ಮತ್ತು ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಹೆಚ್ಚಿನ